**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಗೋವಿಂದರಾಜು ರವರು ನಿಯಮ 72 ರ ಅಡಿಯಲ್ಲಿ ಮಂಡಿಸಿರುವ ಗಮನ ಸೆಳೆಯುವ ಸೂಚನೆಗೆ ಉತ್ತರ.**

**:ಸೂಚನೆ:**

ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ)ಯಿಂದ ಕೋಲಾರ ಜಿಲ್ಲೆಯ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಶಿವಾರಪಟ್ಟಣ ಗ್ರಾಮದ ಸರ್ವೆ ನಂ. 191/1 ರಲ್ಲಿರುವ 1 ಎಕರೆ 23 ಗುಂಟೆ ಜಮೀನು ಹಾಗೂ ಸರ್ವೆ ನಂ 191/2 ರಲ್ಲಿರುವ 3 ಎಕರೆ 10 ಗುಂಟೆ ಜಮೀನುಗಳನ್ನು ಭೂಸ್ವಾಧೀನಪಡಿಸಿಕೊಳ್ಳಲು, ಮಂಡಳಿಯಿಂದ ಅಧಿಸೂಚನೆ ಸಂಖ್ಯೆ ಸಿಐ 79 ಎಸ್‌ಪಿಕ್ಯೂ 2024, ದಿನಾಂಕ: 10.09.2024 ರಂದು ಆದೇಶ ಹೊರಡಿಸಿರುತ್ತದೆ, ಆದರೆ ಈಗಾಗಲೇ ಸದರಿ ಜಮೀನುಗಳು ವಸತಿ ಉದ್ದೇಶಕ್ಕಾಗಿ ಜಿಲ್ಲಾಧಿಕಾರಿಗಳಿಂದ ದಿನಾಂಕ:15.03.2019 ರಂದು ಭೂ ಪರಿವರ್ತನೆಗೊಂಡಿರುತ್ತದೆ ಹಾಗೂ ಪೂರ ವಿಸ್ತೀರ್ಣ 4-33 ಎಕರೆ ಜಮೀನು ವಸತಿ ಉದ್ದೇಶದ ಏಕ ನಿವೇಶನ ವಿನ್ಯಾಸ ನಕ್ಷೆ ತಾಂತ್ರಿಕವಾಗಿ ಅನುಮೋದನೆ ಸಹ ಆಗಿದ್ದು, ಗ್ರಾಮ ಪಂಚಾಯ್ತಿಯಿಂದಲೂ ಸಹ ಇ-ಖಾತಾವನ್ನು ಪಡೆದು ಸರ್ಕಾರಕ್ಕೆ ನೀಡಬೇಕಾಗಿರುವ ತೆರಿಗೆ ಹಣವನ್ನು ಪಾವತಿಸುತ್ತಾ ಬರುತ್ತಿದ್ದಾರೆ.

ಆದರೆ ಕೆಐಎಡಿಬಿ ಯವರು ಭೂಸ್ವಾಧೀನ ಮಾಡುವ ಮುಂಚೆ ಪ್ರಸ್ತುತ ವಾಸ್ತುವಾಂಶವನ್ನು ನೋಡದೆ ಏಕಾಏಕೀ ಭೂಸ್ವಾಧೀನ ಪಟ್ಟಿಯಲ್ಲಿ ಸೇರಿಕೊಂಡಿದ್ದು, ಇದರಲ್ಲಿ ವಿಶೇಷ ಭೂಸ್ವಾಧೀನ ಅಧಿಕಾರಿ ಶ್ರೀಮತಿ ವೆಂಕಟಲಕ್ಷ್ಮೀ ರವರು ಭೂಮಾಲೀಕರಿಂದ ಹಣಕ್ಕಾಗಿ ಒತ್ತಾಯಿಸಿರುವುದು ಮೇಲ್ನೋಟಕ್ಕೆ ಕಂಡುಬಂದಿರುವ ಹಿನ್ನೆಲೆಯಲ್ಲಿ ಈ ವಿಷಯವನ್ನು ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವರ ಗಮನಸೆಳೆಯಲು ಬಯಸುತ್ತೇನೆ.

**:ಹೇಳಿಕೆ:**

ಕೋಲಾರ ಜಿಲ್ಲೆ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಜಕ್ಕಸಂದ್ರ, ಶಿವಾರಪಟ್ಟಣ, ರಾಮೇನಹಳ್ಳಿ, ಕಣಿವೇನಹಳ್ಳಿ, ಹೊಂಗೇನಹಳ್ಳಿ ಮತ್ತು ವರದೇನಹಳ್ಳಿ ಗ್ರಾಮಗಳಲ್ಲಿ ಮಾಲೂರು ಕೈಗಾರಿಕಾ ಪ್ರದೇಶದ ಮುಂದುವರೆದ ಭಾಗವಾಗಿ 4ನೇ ಹಂತದ ಯೋಜನೆಯನ್ನು ಕೈಗೊಳ್ಳುವ ಉದ್ದೇಶದಿಂದ 1637-21 ½ ಎಕರೆ ಜಮೀನಿಗೆ ದಿನಾಂಕ:10.09.2024ರಂದು ಅಧಿಸೂಚನೆ ಹೊರಡಿಸಲಾಗಿರುತ್ತದೆ.

ಪ್ರಸ್ತಾವಿತ ಅಧಿಸೂಚನೆಯಲ್ಲಿ ಶಿವಾರಪಟ್ಟಣ ಗ್ರಾಮದ ಸರ್ವೆ ನಂ.191/1 ರ 1-23 ಎಕರೆ ಹಾಗೂ ಸರ್ವೆ ನಂ.191/2 ರ 3-10 ಎಕರೆ ಜಮೀನು ಒಳಗೊಂಡಿರುತ್ತದೆ. ಸದರಿ ಪ್ರದೇಶವು ಪ್ರಸ್ತಾವಿತ ಯೋಜನೆಯ ಭೂಸ್ವಾಧೀನದ ಮಧ್ಯೆ ಬರುತ್ತಿದ್ದು, ಕೈಗಾರಿಕಾ ಪ್ರದೇಶದ ಆಯಕಟ್ಟಿನೊಳಗೆ ಬರುತ್ತಿರುವ ಹಿನ್ನೆಲೆಯಲ್ಲಿ ಸ್ವಾಧೀನಪಡಿಸಲಾಗಿರುತ್ತದೆ.

ಮುಂದುವರೆದು, ಕೆಐಎಡಿ ಕಾಯ್ದೆಯ ಅನುಸಾರ ಪ್ರಾಥಮಿಕ ಅಧಿಸೂಚನೆಯ ನಂತರ ಮೇಲ್ಕಂಡ ಜಮೀನಿನ ಖಾತೆದಾರರಿಗೂ ಸಹ ಕಲಂ 28(2) ರಡಿ ನೋಟೀಸ್ ನ್ನು ನೀಡಿ ಕಲಂ 28(3) ರಡಿ ವಿಚಾರಣೆ ನಡೆಸಲಾಗಿರುತ್ತದೆ. ಸದರಿ ವಿಚಾರಣೆಯಲ್ಲಿ ಪ್ರಸ್ತಾವಿತ ಜಮೀನಿನ ಖಾತೆದಾರರು ತಮ್ಮ ಜಮೀನನ್ನು ಈಗಾಗಲೇ ವಸತಿ ಯೋಜನೆಯ ಉದ್ದೇಶದಿಂದ ಭೂಪರಿವರ್ತನೆ ಮತ್ತು ಇ-ಖಾತಾ ಪಡೆದಿದ್ದು, ತಮ್ಮ ಜಮೀನನ್ನು ಸ್ವಾಧೀನದಿಂದ ಹೊರತುಪಡಿಸಬೇಕೆಂದು ಕೋರಿರುವುದು ಕಂಡುಬರುತ್ತದೆ.

ಕೆಐಎಡಿ ಕಾಯ್ದೆ ಕಲಂ 28(3) ರಡಿ ವಿಶೇಷ ಭೂಸ್ವಾಧೀನಾಧಿಕಾರಿಗಳು, ಪ್ರಸ್ತಾವಿತ ಜಮೀನು ಭೂಪರಿವರ್ತನೆ ಆಗಿದ್ದರೂ ಸಹ ಮಂಡಳಿಯಲ್ಲಿ ಭೂಪರಿವರ್ತನೆಗೊಂಡ ಜಮೀನಿಗೆ ಹೆಚ್ಚುವರಿ ಪರಿಹಾರ ನಿಗದಿಪಡಿಸುವ ಅವಕಾಶವಿರುವ ಹಿನ್ನೆಲೆಯಲ್ಲಿ ಹಾಗೂ ಒಂದೊಮ್ಮೆ ಸದರಿ ಪ್ರದೇಶವನ್ನು ಭೂಸ್ವಾಧೀನದಿಂದ ಹೊರತುಪಡಿಸುವ ಬಗ್ಗೆ ಆದೇಶ ಹೊರಡಿಸಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದಲ್ಲಿ, ಪ್ರಸ್ತಾವಿತ ಕೈಗಾರಿಕಾ ಪ್ರದೇಶದ ಆಯಕಟ್ಟಿಗೆ ಧಕ್ಕೆ ಉಂಟಾಗದಿರುವುದನ್ನು ಗಮನದಲ್ಲಿಟ್ಟುಕೊಂಡು ಹಾಗೂ ವಿಶೇಷ ಭೂಸ್ವಾಧೀನಾಧಿಕಾರಿಗಳಿಗೆ ಮಂಡಳಿಯು ಅಧಿಸೂಚಿಸಿದ ಯಾವುದೇ ಪ್ರದೇಶವನ್ನು ತಮ್ಮ ಹಂತದಲ್ಲಿಯೇ ಕೈಬಿಡುವ ಅಧಿಕಾರ ಇಲ್ಲದಿರುವ ಹಿನ್ನೆಲೆಯಲ್ಲಿ, ಕಲಂ 28(3) ರಡಿ ಆದೇಶ ಹೊರಡಿಸಿದ್ದು, ಇನ್ನುಳಿದಂತೆ ಒಟ್ಟಾರೆ ಯೋಜನಾ ಪ್ರದೇಶದ ಜೆ.ಎಂ.ಸಿ. ಕಾರ್ಯ ಅಂತಿಮಗೊಳಿಸಿ, ಕಲಂ 28(4) ರಡಿ ಅಂತಿಮ ಅಧಿಸೂಚನೆ ಪ್ರಸ್ತಾವನೆ ಸಲ್ಲಿಸಲು ಬಾಕಿ ಇರುತ್ತದೆ.

ಶಿವಾರಪಟ್ಟಣ ಗ್ರಾಮದ ಅಭಿವೃದ್ಧಿ ಹೊಂದಿದ ಜಮೀನನ್ನು ಕೈಗಾರಿಕಾ ಪ್ರದೇಶದ ಆಯಕಟ್ಟಿಗೆ ಯಾವುದೇ ಧಕ್ಕೆಯಾಗದಂತೆ ಪರಿಶೀಲಿಸಿ ವಿಧಿ 28(4)ರ ಅಧಿಸೂಚನೆ ಹೊರಡಿಸುವ ಸಂದರ್ಭದಲ್ಲಿ ಪುನರ್ ಪರಿಶೀಲಿಸಿ ಕ್ರಮ ವಹಿಸಲಾಗುತ್ತದೆ.

**ಸಂಖ್ಯೆ: ಸಿಐ 599 ಐಎಪಿ 2025**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು